# ಎಲ್ಲರಿಗೂ ಇಂಗ್ಲಿಷ್ | ಮೊದಲ ತಲೆಮಾರಿನ ಕಲಿಕಾರ್ಥಿಗಳಿಗೆ ಕಾರ್ಯಕ್ರಮಗಳು

ಚಂದ್ರಾ ವಿಶ್ವನಾಥನ್

**ಹಿನ್ನೆಲೆ**

ಇಂಗ್ಲಿಷ್ ಕೌಶಲಗಳು ಎಲ್ಲರಿಗಾಗಿ– ಇದು **ಇಎಲ್‌ಎಫ್ (ELF)** ಲರ್ನಿಂಗ್ ಸೊಲ್ಯೂಷನ್‌ನ ಧ್ಯೇಯವಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶದ ಮಕ್ಕಳ ನಡುವಿನ ಶೈಕ್ಷಣಿಕ ಅಂತರವನ್ನು ಕಡಿಮೆ ಮಾಡಲು ನಾವು ಸ್ಥಾಪಿಸಿದ ಸಂಘಟನೆಯಾಗಿದೆ. ಬಹುತೇಕ ಇಂಗ್ಲಿಷ್ ಕಲಿಕಾ ಕಾರ್ಯಕ್ರಮಗಳು **ಹೇಗೆ** ಎನ್ನುವುದರ ಬಗೆಗೆ ಅಂದರೆ, ಇಂಗ್ಲಿಷ್ ಭಾಷಾ ಕಲಿಕೆಗೆ ಪಠ್ಯ ವಿಷಯದ ವಿನ್ಯಾಸ ಹೇಗೆ? ಎನ್ನುವುದರತ್ತ ಗಮನ ವಹಿಸುತ್ತವೆ. ಆದರೆ ನಾವು **ಏಕೆ** ಎನ್ನುವದರಿಂದ ಅಂದರೆ – ಏಕೆ ಇಂಗ್ಲಿಷ್ ಕಲಿಯಬೇಕೆಂದು ಬಯಸುತ್ತೇವೆ ಎಂಬ ಪ್ರಶ್ನೆಯನ್ನಿರಿಸಿಕೊಂಡು ಕಾರ್ಯಕ್ರಮವನ್ನು ಆರಂಭಿಸಿದೆವು. ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು ಮತ್ತು ಉತ್ತಮ ಉದ್ಯೋಗ ಅವಕಾಶಗಳನ್ನು ಗಿಟ್ಟಿಸುವುದು ಯೋಗ್ಯ ಕಾರಣಗಳಾಗಿದ್ದರೂ, ಮಕ್ಕಳು ತಮ್ಮ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವುದು ಅತಿ ಮುಖ್ಯವಾದ ಕಾರಣವಾಗಿದೆ.

ಕಡಿಮೆ ಆದಾಯದ ಕುಟುಂಬಗಳಿಂದ ಬಂದ ದೊಡ್ಡ ಸಂಖ್ಯೆಯ ಮಕ್ಕಳ ಜೊತೆ ಕಾರ್ಯನಿರ್ವಹಿಸುವಾಗ ಸ್ಪಷ್ಟವಾಗುವುದೆನೆಂದರೆ, ಇತರ ಕೌಶಲಗಳಲ್ಲಿ ಕ್ಷಮತೆ ಇದ್ದರೂ ಇಂಗ್ಲೀಷ್‌ನಲ್ಲಿ ಮಾತನಾಡಲಾಗದ ಮಕ್ಕಳು, ಇಂಗ್ಲಿಷ್ ಬಲ್ಲ ಮಕ್ಕಳ ಎದುರು ಕೀಳರಿಮೆ ಅನುಭವಿಸುತ್ತಾರೆ.

ಒಂದು ವೇಳೆ ಇಂಗ್ಲಿಷ್ ತರಗತಿಗಳು ವ್ಯಾಕರಣ ಮತ್ತು ಉಚ್ಚಾರಣೆಯ ನಿಯಮಗಳ ಬಗೆಯೇ ಕಟ್ಟುಬಿದ್ದಿದ್ದರೆ, ಭಾಷೆಯ ಬಗೆಗೆ ಮಕ್ಕಳು ಇನ್ನೂ ಹೆಚ್ಚು ಭಯ ಪಡುತ್ತಾರೆ. ಇದು ಬಹುಸಂಖ್ಯಾತ ಮೊದಲ ತಲೆಮಾರಿನ ಕಲಿಕಾರ್ಥಿಗಳು ಇಂಗ್ಲಿಷ್ ಕೌಶಲಗಳನ್ನು ಗಳಿಸುವುದರಲ್ಲಿ ಸೋಲಲು ಕಾರಣವಾಗುತ್ತದೆ. ಒಂದು ವೇಳೆ, ಅಂತಿಮವಾಗಿ ಕೆಲವು ಮಕ್ಕಳು ಕೌಶಲಗಳನ್ನು ಕಲಿತರೂ, ಅವರಲ್ಲಿ ಇಂಗ್ಲಿಷ್‌ನಲ್ಲಿ ಸರಳವಾದ ಸಂಭಾಷಣೆ ನಡೆಸುವುದಕ್ಕೂ ಆತ್ಮವಿಶ್ವಾಸದ ಕೊರತೆ ಕಾಣುತ್ತದೆ.

**ಮೊದಲ ತಲೆಮಾರಿನ ಕಲಿಕಾರ್ಥಿಗಳಿಗೆ ಇಂಗ್ಲಿಷ್**

ಇಂಗ್ಲಿಷ್ ಭಾಷೆ ಕಲಿಯುವ ಪ್ರಕ್ರಿಯೆಯಲ್ಲಿಯೇ ಮಕ್ಕಳು ಆತ್ಮವಿಶ್ವಾಸವನ್ನೂ ಬೆಳೆಸುವಂತೆ ಕಲಿಯುವುದು ಹೇಗೆ ಸಾಧ್ಯ ಎಂಬ ಕುರಿತು ನಾವು ಸಂಶೋಧನೆ ನಡೆಸುವುದಕ್ಕೆ ಪ್ರಾರಂಭಿಸಿದೆವು. ತಮಿಳುನಾಡಿನ ಗ್ರಾಮೀಣ ಭಾಗದ 48 ಸರಕಾರಿ ಶಾಲೆಗಳ ಶಿಕ್ಷಕರೊಂದಿಗೆ ನಮ್ಮ ಪ್ರಥಮ ಪ್ರಯತ್ನವು ಪ್ರಾರಂಭವಾಯಿತು. ಈ ತರಗತಿಗಳಲ್ಲಿ ಶಿಕ್ಷಕರು ಎರಡು ಮುಖ್ಯ ನಿಯಮಗಳನ್ನು ಅನುಸರಿಸುತ್ತಿದ್ದರು– ಒಂದು, ಮಕ್ಕಳನ್ನು ತಪ್ಪುಮಾಡುವುದಕ್ಕೆ ಬಿಡುವುದು, ಮತ್ತು ಎರಡನೆಯದು, ಇಂಗ್ಲಿಷ್ ಭಾಷೆಯೊಳಗೆ ಅವರು ಮಾತನಾಡುವುದಕ್ಕೆ ಪ್ರಯತ್ನಿಸುವಾಗ ಸ್ಥಳೀಯ ಭಾಷೆಯ ಪದಗಳನ್ನು ಸೇರಿಸಿಕೊಳ್ಳಲು ಬಿಡುವುದು.



ಮಕ್ಕಳು ಸರಳವಾಗಿ ಇಂಗ್ಲಿಷ್ ಓದಲು ಕಲಿಯಲು ಕೆಲವು ತಂತ್ರಗಳನ್ನು ಅಭಿವೃದ್ಧಿಪಡಿಸುವುದಕ್ಕೂ ನಾವು ಪ್ರಾರಂಭಿಸಿದೆವು. ವಿಶೇಷವಾಗಿ ಇಂಗ್ಲಿಷನ್ನು ಮೊದಲ ಬಾರಿಗೆ ಶಾಲೆಗಳಲ್ಲಿ ಕಲಿಯಲು ಬಂದ ಮಕ್ಕಳ ಜೊತೆಗೆ ಇದನ್ನು ಪ್ರಯೋಗಿಸಿದೆವು. ಇಂಗ್ಲಿಷ್‌ನಂಥ ಒಂದು ಭಾಷೆಯಲ್ಲಿ, ಬಹಳ ಪದಗಳು ಶಾಬ್ದಿಕ ((Phonics) ನಿಯಮಗಳನ್ನು ಪಾಲಿಸುವುದಿಲ್ಲ. ಇದರಿಂದ ಓದನ್ನು ಕಲಿಯಲು ಪ್ರಯತ್ನಿಸುವ ಮಕ್ಕಳು ಬಹಳ ಬೇಗನೆ ಹತಾಶೆಗೆ ಒಳಗಾಗುತ್ತಾರೆ. ಅವರು ಇಂಗ್ಲೀಷ್ ಭಾಷೆ ಯಾವುದೇ ಸಾಮಾನ್ಯ ತರ್ಕಗಳನ್ನೂ ಅನುಸರಿಸುವುದಿಲ್ಲ ಎಂಬ ಅವಸರದ ತೀರ್ಮಾನಕ್ಕೆ ಬರುತ್ತಾರೆ. ಹಾಗಾಗಿ ತಾವು ಇಂಗ್ಲಿಷ್ ಓದುವುದನ್ನು ಕಲಿಯುವ ಸಂಭವವೇ ಇಲ್ಲ ಎಂದೇ ಭಾವಿಸುತ್ತಾರೆ. ಹಲವು ಮಂದಿ ಶಿಕ್ಷಕರ ಜೊತೆ ಕೆಲಸಮಾಡುತ್ತಾ ಇಂಗ್ಲಿಷ್ ಓದುವುದನ್ನು ಕಲಿಯುವುದಕ್ಕೆ ಸರಳವಾದ ಶಾಬ್ದಿಕ ಆಧಾರಿತ ವಿಧಾನವೊಂದನ್ನು ನಾವು ಅಭಿವೃದ್ಧಿಪಡಿಸಿದೆವು.

ಸದ್ಯ ಭಾರತದಲ್ಲಿ, 115 ಶಾಲೆಗಳಲ್ಲಿ ಇಎಲ್‌ಎಫ್ ಇಂಗ್ಲೀಷ್ ಕಾರ್ಯಕ್ರಮವನ್ನು ಬಳಕೆ ಮಾಡಲಾಗುತ್ತಿದೆ. ಇವುಗಳಲ್ಲಿ ಮಿಝೋರಾಂನ 40 ಸರಕಾರೀ ಶಾಲೆಗಳು ಮತ್ತು ಅಸ್ಸಾಂನ ಎರಡು ಶಾಲೆಗಳು ಸೇರಿದ್ದರೆ, ಉಳಿದವು (73) ತಮಿಳುನಾಡಿನಲ್ಲಿವೆ. ಶಿಕ್ಷಕರು ತಮ್ಮ ಮುಂದೆ ಸ್ಪಷ್ಟ ಗುರಿಗಳನ್ನು ಇರಿಸಿ, ಎಲ್ಲಾ ಮಕ್ಕಳೂ ಕಲಿಯುವ ಸಾಮರ್ಥ್ಯ ಇರುವವರು ಎಂದು ನಂಬಿ ಮುಂದೆ ಹೋದಾಗ ದೊಡ್ಡ ಮಟ್ಟದ ಫಲಿತಾಂಶಗಳನ್ನು ಸಾಧಿಸಲಾಗಿದೆ ಎಂಬುದು ಕಾರ್ಯಕ್ರಮದ ವೇಳೆ ಮತ್ತೆಮತ್ತೆ ಸಾಬೀತಾದ ಅಂಶವಾಗಿದೆ.

**ವಿಧಾನ**

ಸಾಮಾನ್ಯವಾಗಿ ಪ್ರತಿ ತರಗತಿಯೂ ಒಂದು ಆಡಿಯೋ ಅಥವಾ ವೀಡಿಯೋ ಪಾಠದಿಂದ ಪ್ರಾರಂಭವಾಗುತ್ತದೆ. ಇದರ ನಂತರ ಸಂಭಾಷಣೆಯನ್ನು ಉತ್ತೇಜಿಸುವಂಥ ವೃತ್ತದ ಅವಧಿ ಚಟುವಟಿಕೆಗಳು (Circle-time activities) ಮತ್ತು ಚಿಕ್ಕ ಗುಂಪು ಚಟುವಟಿಕೆಗಳು ನಡೆಯುತ್ತವೆ. ಪ್ರಶ್ನೆ ಮತ್ತು ಉತ್ತರದ ಅಭ್ಯಾಸಗಳು



ಜೋಡಿ ತಂಡಗಳಲ್ಲಿ ನಡೆಯುವಂತೆ ನೋಡಿಕೊಂಡು ಪ್ರತಿ ಮಗುವೂ ಮಾತನಾಡುವ ಅವಕಾಶವನ್ನು ಪಡೆಯುವಂತೆ ನೋಡಿಕೊಳ್ಳಲಾಗುತ್ತದೆ. ಪಾತ್ರಾಭಿನಯ ಮತ್ತು ಹಾಡುಗಳು ಮಕ್ಕಳಿಗೆ ಅವರ ಇಂಗ್ಲಿಷ್ ಕುರಿತ ಭಯವನ್ನು ಮೀರಿನಿಲ್ಲುವುದಕ್ಕೆ ನೆರವಾಗುತ್ತವೆ. ನಾಲ್ಕು ತಿಂಗಳ ಅಲ್ಪ ಅವಧಿಯಲ್ಲಿ 51 ಶೇಕಡಾ ಮಕ್ಕಳು ಇಂಗ್ಲಿಷ್‌ನಲ್ಲಿ ಸಾಮಾನ್ಯ ಸಂಭಾಷಣಾ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡುವ ಮಟ್ಟಕ್ಕೆ ಬೆಳೆದು ನಿಂತುದನ್ನು ನಾವು ನೋಡಿದ್ದೇವೆ.

ನಾವು ಓದುವ ಕೌಶಲವನ್ನು 8 ಸರಳವಾದ ಹಂತಗಳಾಗಿ ವಿಭಾಗಿಸಿಕೊಂಡಿದ್ದೇವೆ. ಪ್ರಾರಂಭದಲ್ಲಿ ಅಕ್ಷರಗಳ ಧ್ವನಿ, ನಂತರ ಹಂತಹಂತವಾಗಿ ಪದಗಳಿಗೆ, ವಾಕ್ಯಗಳಿಗೆ, ವಾಕ್ಯವೃಂದಗಳಿಗೆ ಮತ್ತು ಕಥೆಗಳಿಗೆ ಮುಂದುವರಿಯುತ್ತೇವೆ. ಪ್ರತಿ ಹಂತದಲ್ಲೂ ಕೆಲವು ಹೊಸ ಧ್ವನಿಗಳನ್ನು, ಧ್ವನಿ ಸಂಯೋಜನೆಗಳನ್ನು ಮತ್ತು ಪದಗಳನ್ನು ಪರಿಚಯಿಸುತ್ತೇವೆ. ಪ್ರತಿ ಹಂತದಲ್ಲೂ ವಿಷಯಗಳನ್ನು ಎಚ್ಚರಿಕೆಯಿಂದ ಗುಂಪಿನ ಮಟ್ಟಕ್ಕೆ ಅನುಗುಣವಾಗಿ ಆಯ್ದುಕೊಳ್ಳುತ್ತೇವೆ. ಆ ಮೂಲಕ ಮಗು ಹೊಸ ಪದಗಳನ್ನು ಮಾತ್ರ ಎದುರಿಸುತ್ತದೆ. ಮಗು ಈಗಾಗಲೇ ಪರಿಚಯಿಸಿಕೊಂಡ ಧ್ವನಿಗಳಿಂದ ಆ ಪದಗಳನ್ನು ಓದುವುದು ಸಾಧ್ಯವಿದೆ. ಪ್ರತಿ ಹಂತದಲ್ಲೂ ಕೆಲವು ದೃಷ್ಟಿಗೋಚರ ಪದಗಳನ್ನೂ ಪರಿಚಯಿಸಲಾಗುತ್ತಿತ್ತು. ಆ ಮೂಲಕ ಮಗು ಬೇಗನೆ ವಾಕ್ಯ ಮತ್ತು ವಾಕ್ಯವೃಂದಗಳನ್ನು ಓದುವ ಕಡೆಗೆ ತಯಾರಾಗುತ್ತಿತ್ತು.

ಈ ಲೇಖನದಲ್ಲಿ, ಈ ನಮ್ಮ ಪ್ರಯಾಣದ ಕೆಲವು ಕಲಿಕೆಗಳನ್ನು ಮತ್ತು ಈ ಚಿಂತನೆಗಳನ್ನು ಶಿಕ್ಷಕರು ತಮ್ಮ ಇಂಗ್ಲಿಷ್ ತರಗತಿಗಳಲ್ಲಿ ಹೇಗೆ ಅಳವಡಿಸಬಹುದು ಎಂಬುದನ್ನು ಹಂಚಿಕೊಳ್ಳುತ್ತೇವೆ.

**ಇಂಗ್ಲೀಷ್ ಸಂಭಾಷಣೆಯ ತರಗತಿ**

ಮಾತಿಗೆ ಮೊದಲು ಆಲಿಸುವುದು

ಮಕ್ಕಳಿಗೆ ಏನಾದರೂ ಹೇಳುವಂತೆ ಕೇಳುವ ಮೊದಲು, ಮಕ್ಕಳಿಂದ ಶಿಕ್ಷಕರು ಏನನ್ನು ನಿರೀಕ್ಷಿಸುವರೋ ಅದನ್ನು ಶಿಕ್ಷಕರು ಪ್ರದರ್ಶಿಸಬೇಕು ಮತ್ತು ಮಕ್ಕಳು ಅದನ್ನು ನೋಡಬೇಕು. ಇದನ್ನು ನಾವು ನಮ್ಮ ತರಗತಿಗಳಲ್ಲಿ ಸಂವಾದಾತ್ಮಕ ವೀಡಿಯೋಗಳ ಮೂಲಕ ಮಾಡುತ್ತೇವೆ. ಆದರೆ ಶಿಕ್ಷಕರು ನಿಜ ಜೀವನದ ಉದಾಹರಣೆಗಳನ್ನು ಬಳಸುವುದೂ ಸಾಧ್ಯವಿದೆ ಅಥವಾ ಸರಳ ಚಿತ್ರಪತ್ರಗಳ (ನೋಡಿ ಮತ್ತು ಹೇಳಿ / Show and tell) ಸಹಾಯವನ್ನೂ ಪಡೆಯಬಹುದು. ಉದಾಹರಣೆಗೆ, ಮಕ್ಕಳು ಸರಳವಾದ ಒಂದು ಸಂಭಾಷಣೆಯನ್ನು ತರಗತಿಯ ಒಳಗಿರುವ ವಸ್ತುಗಳ ಮೇಲೆ ಅಭ್ಯಾಸ ಮಾಡಬೇಕು ಎಂದು ನಾವು ಬಯಸುವುದಾದರೆ, ಶಿಕ್ಷಕರು ಈ ರೀತಿಯಾಗಿ ಪ್ರಾರಂಭಿಸುತ್ತಾರೆ: ಇದು ಏನು? ಇದು ಒಂದು ಪೆನ್. ಅದು ಏನು? ಅದು ಒಂದು ಪೆನ್. (What is this? This is a pen. What is that? That is a fan)




ಶಿಕ್ಷಕಿ ಆ ವಸ್ತುವಿನ ಕಡೆಗೆ ಬೆರಳು ತೋರಿಸಿ ಪ್ರಶ್ನೆಗಳನ್ನು ಕೇಳುತ್ತಾರೆ. ಮಕ್ಕಳು ಇಂಗ್ಲಿಷ್‌ನಲ್ಲಿ ಹೆಸರು ತಿಳಿದಿರುವ ವಸ್ತುಗಳನ್ನೇ ಅವರು ಆಯ್ದುಕೊಳ್ಳುತ್ತಾರೆ. ಉದಾಹರಣೆಗೆ, 'ಫ್ಯಾನ್ ಮತ್ತು ಟೇಬಲ್' ಪದಗಳು. ಯಾವುದು ಈಗಾಗಲೇ ಮಕ್ಕಳ ಶಬ್ದ ಮತ್ತು ಜ್ಞಾನಕೋಶದಲ್ಲಿ ಆಳವಾಗಿ ಬೇರೂರಿದೆಯೋ ಅಂತಹ ಪದಗಳನ್ನು ಆಯ್ದುಕೊಳ್ಳಬೇಕು. ವೆಲ್ಲೂರಿನ ಒಂದು ಸರಕಾರೀ ಶಾಲೆಯಲ್ಲಿ ಮಕ್ಕಳು ಈ ಪದಗಳು ತಮಿಳು ಭಾಷೆಯವು ಎಂದರಲ್ಲದೆ ಅದಕ್ಕೆ ತಮಿಳು ಭಾಷೆಯಲ್ಲಿ ಸಮಾನಾರ್ಥಕ ಪದಗಳಿಲ್ಲ ಎಂದರು!

ಈ ಚಟುವಟಿಕೆಯ ವೇಳೆ, ಶಿಕ್ಷಕಿಯರು ಮಕ್ಕಳು ಪ್ರತಿಕ್ರಿಯೆ ಕೊಡುವುದನ್ನು ನಿರೀಕ್ಷಿಸುವುದಿಲ್ಲ. ಆಕೆಯೇ ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ಉತ್ತರಿಸುತ್ತಾರೆ. ಆ ವೇಳೆ ಮಕ್ಕಳು ಆಲಿಸುತ್ತಾರೆ. ಮಕ್ಕಳು ಅರ್ಥಮಾಡಲಿ ಎಂದು ಶಿಕ್ಷಕಿಯರು ಪ್ರತಿ ಪದವನ್ನೂ

ಮಕ್ಕಳ ಮಾತೃಭಾಷೆಯಲ್ಲಿ ತರ್ಜುಮೆಮಾಡಿ ಹೇಳುವುದನ್ನು ನಾವು ಉತ್ತೇಜಿಸುವುದಿಲ್ಲ. ಬದಲಾಗಿ ಶಿಕ್ಷಕಿಯರು ಮಕ್ಕಳನ್ನು ಉತ್ತೇಜಿಸುವಂಥ ಚಲನವಲನಗಳನ್ನು, ಚಿತ್ರಗಳನ್ನು ಮತ್ತು ಮುಖದಲ್ಲಿ ಅಭಿವ್ಯಕ್ತಿಗಳನ್ನು ಮಾಡಿ ತೋರಿಸುತ್ತಾರೆ. ಆ ರೀತಿಯಾಗಿ ತರ್ಜುಮೆ ಮಾಡದೆ ತಾವು ಹೇಳುವುದು ಏನು ಎಂಬುದನ್ನು ತಿಳಿದುಕೊಳ್ಳಲು ಸಹಾಯಮಾಡುತ್ತಾರೆ.

**ವೃತ್ತದ ಅವಧಿ ಚಟುವಟಿಕೆಗಳು (Circle time practice)**

ಶಿಕ್ಷಕರು ಹೇಳುವುದನ್ನು ಆಲಿಸಿದ ನಂತರದಲ್ಲಿ, ಒಂದು ವೃತ್ತದಲ್ಲಿ ನಿಂತು ಪ್ರಶ್ನೆಗಳನ್ನು ಕೇಳುವ ಮತ್ತು ಉತ್ತರಗಳನ್ನು ನೀಡುವ ಅಭ್ಯಾಸ ಮಾಡುವುದಕ್ಕೆ ಮಕ್ಕಳು ಸಿದ್ಧವಾಗುತ್ತಾರೆ. ಮೊದಲ ಮಗು ತನ್ನ ಪಕ್ಕದವಳ/ನನ್ನು ಒಂದು ಪ್ರಶ್ನೆ ಕೇಳುತ್ತದೆ. ಅದನ್ನು ಉತ್ತರಿಸಿದ ನಂತರ, ಎರಡನೆ ಮಗುವಿನ ಪ್ರಶ್ನೆ ಕೇಳುವ ಸರದಿ ಆರಂಭವಾಗುತ್ತದೆ. ಪ್ರಶ್ನೆಗಳು ಮತ್ತು ಉತ್ತರಗಳು ವೃತ್ತದಲ್ಲಿ ಸರದಿಯಲ್ಲಿ ಸಾಗುತ್ತಾ ಪ್ರತಿ ಮಗುವಿಗೂ ಮಾತನಾಡುವ ಅವಕಾಶವನ್ನು ಸೃಷ್ಟಿಸುತ್ತದೆ. ಈ ಹಂತದಲ್ಲಿ ತಪ್ಪುಗಳನ್ನು ಸರಿಪಡಿಸುವುದಕ್ಕೆ ಇಲ್ಲ. ಮಕ್ಕಳು ಹಿಂಜರಿದರೆ, ಶಿಕ್ಷಕರು ಇನ್ನೊರ್ವ ಮಗುವಿನ ಜೊತೆ ಪಾತ್ರಾಭಿನಯ ಕೈಗೊಳ್ಳುತ್ತಾರೆ ಮತ್ತು ಸಂಭಾಷಣೆಯನ್ನು ಮತ್ತೊಮ್ಮೆ ಪ್ರದರ್ಶಿಸುತ್ತಾರೆ.

**ಚಿಕ್ಕ ತಂಡಗಳಲ್ಲಿ ಅಭ್ಯಾಸ**

ಶಿಕ್ಷಕರು 4–5 ಮಕ್ಕಳಿರುವ ಗುಂಪುಗಳನ್ನು ರಚಿಸುತ್ತಾರೆ. ಈಗ ಮಕ್ಕಳು ಚಿಕ್ಕ ತಂಡಗಳಲ್ಲಿ ತಾವು ಕಲಿತ ಸರಳ ಸಂಭಾಷಣೆಗಳನ್ನು ಅಭ್ಯಾಸ ಮಾಡುತ್ತಾರೆ. ಚಿಕ್ಕ ತಂಡಗಳಲ್ಲಿ ಮಕ್ಕಳು ತಮ್ಮನ್ನು ಗಮನಿಸುವ ದೊಡ್ಡವರು ಒಬ್ಬರು ಇದ್ದಾರೆ ಎಂದು ಆತಂಕ–ಪಡುವುದಿಲ್ಲ. ಅವರು ಮಾತನಾಡುವುದನ್ನು ಪ್ರಯತ್ನಿಸಬಹುದು, ನಗಬಹುದು ಮತ್ತು ಸಂತಸದಲ್ಲಿ ಇರಬಹುದು. ಶಿಕ್ಷಕರು ಕ್ರಮೇಣ ಮಕ್ಕಳ ಧ್ವನಿಗಳ ಗುಂಯ್ಗುಡುವಿಕೆಗೆ ಹೊಂದಿಕೊಳ್ಳುತ್ತಾರೆ. ಕೊನೆಗೂ ಇಂಗ್ಲೀಷ್ ಸಂಭಾಷಣೆಯ ತರಗತಿಯು ನಿಶ್ಶಬ್ದವಾಗಿ ಇರುವುದು ಸಾಧ್ಯವಿಲ್ಲ!

**ಚಿತ್ರಗಳನ್ನು ವಿವರಿಸುವುದು**

ಜಾನ್ ಹಾಲ್ಟ್ ಹೇಳಿದ ಹಾಗೆ, ಏನಾದರೂ ಹೇಳು ಎಂದು ಮಕ್ಕಳಿಗೆ ಕೇಳಿದಾಗ, ಅವರಿಗೆ ಪ್ರತಿಕ್ರಿಯಿಸುವುದಕ್ಕೆ ಸಾಧ್ಯವಾಗುವುದು ಅವರಿಗೆ ಹೇಳುವುದಕ್ಕೆ ಏನಾದರೂ ಇದ್ದರೆ ಮಾತ್ರ. ನಾವು ಮಕ್ಕಳಿಗೆ ಒಂದು ಘಟನೆಯನ್ನು ವಿವರಿಸುವುದಕ್ಕೆ ಕೇಳಿದರೆ ಅಥವಾ ಯಾವುದಾದರೂ ವಿಷಯದ ಮೇಲೆ ಅವರ ಅಭಿಪ್ರಾಯವನ್ನು ತಕ್ಷಣದಲ್ಲಿ ಕೊಡಲು ಹೇಳಿದರೆ, ಆಲೋಚನೆಗಳನ್ನು ಒಗ್ಗೂಡಿಸಿಕೊಳ್ಳಲು ಮತ್ತು ಅಭಿವ್ಯಕ್ತಿಸಿಕೊಳ್ಳುವುದಕ್ಕೆ ಅವರಿಗೆ ಕಷ್ಟ ಆಗಬಹುದು.

ಸಂಭಾಷಣೆಗಳನ್ನು ಪ್ರಾರಂಭಿಸುವುದಕ್ಕೆ ಚಿತ್ರಗಳು ಉತ್ತಮ ಸಾಧನಗಳು. ನಾವು ಚಿತ್ರಗಳನ್ನು ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಲು ಮತ್ತು ಅವರು ನೋಡಿದ್ದನ್ನು ವಿವರಿಸಲು ಸಹಾಯಮಾಡುವುದಕ್ಕೆ ಬಳಸುತ್ತೇವೆ. ಮಕ್ಕಳು ಅವರಾಗಿಯೇ ಮಾತನಾಡುವುದಕ್ಕೆ ಮುಂದೆ ಬರದೇ ಇದ್ದರೆ ಶಿಕ್ಷಕರು ಸರಳ ಪ್ರಶ್ನೆಗಳನ್ನು ಕೇಳಿ ಅವರನ್ನು ಪ್ರೇರೇಪಿಸಬಹುದು– ಚಿತ್ರದಲ್ಲಿ ಯಾರಿದ್ದಾರೆ, ಅವರು ಎಲ್ಲಿದ್ದಾರೆ? ಅವರು ಏನು ಮಾಡುತ್ತಿದ್ದಾರೆ? (Who is in the picture? Where are they? What are they doing?)

ತರಗತಿಯಲ್ಲಿ ನಾವು ಬಳಸುವ ಚಿತ್ರಗಳು ಮಗುವಿನ ಸಂದರ್ಭಕ್ಕೆ ಹೊಂದಿಕೆಯಾಗುವಂತೆ ಇದ್ದರೆ, ಅದು ಅತ್ಯುತ್ತಮವಾಗುತ್ತದೆ. ಮಗುವಿಗೆ ಪರಿಚಿತವಿರುವ ಅದರ ಪರಿಸರದ ವಸ್ತುಗಳನ್ನು ಮತ್ತು ದೃಶ್ಯಾವಳಿಗಳನ್ನು ಬಳಸಿಯೂ, ಇಂಗ್ಲಿಷ್ ಭಾಷೆಯು ಮಗುವಿಗೆ ಬಹಳ ಅಪರಿಚಿತ ಎನಿಸದಂತೆ ಮತ್ತು ಅದು ತನ್ನ ವಾಸಸ್ಥಳಕ್ಕೆ ಹತ್ತಿರವೇ ಇದೆ ಎಂದು ಕಾಣುವಂತೆ ಮಾಡಬಹುದು.

**ಕ್ರಮಾನುಗತಿ ಮತ್ತು ಕಥೆ ಹೇಳುವುದು**

ಕಥೆ ಹೇಳುವುದು, ಸಂವಹನದಲ್ಲಿ ಬಹಳ ಮುಖ್ಯವಾದ ಅಂಶವಾದ ಕ್ರಮಾನುಗತಿಯ ಕೌಶಲಗಳನ್ನು ಬೆಳೆಸುತ್ತದೆ. ಪ್ರತಿ ಮಗುವಿಗೂ ಒಂದು ಕಥೆಯ ಕಾರ್ಡು ನೀಡಲಾಗುತ್ತದೆ. ಆಕೆ/ಆತ ಆ ಕಾರ್ಡಿನ ಚಿತ್ರದ ಕುರಿತಾಗಿ ಒಂದು ಅಥವಾ ಎರಡು ವಾಕ್ಯಗಳನ್ನು ಹೇಳುವುದಕ್ಕೆ ಪ್ರಯತ್ನಿಸುತ್ತಾಳೆ/ನೆ. ತಂಡವಾಗಿ ಒಂದು ಕಥೆಯನ್ನು ಹೇಗೆ ಹೇಳುವುದು ಎಂಬುದನ್ನು ಅವರು ಕಲಿಯುತ್ತಾರೆ.

ಸರಳವಾದ ವೀಡಿಯೋಗಳು (How-to videos) ಮಕ್ಕಳಿಗೆ ಒಂದರ ಮೇಲೆ ಒಂದಾಗಿ ಸಹಾಯವಾಗುವಂಥ ಪರಿಣಾಮಕಾರಿ ಕಲಿಯುವ ದಾರಿಗಳನ್ನು ತೋರಿಸುತ್ತವೆ. ಉದಾಹರಣೆಗೆ, ಆಟವಾಡುವ ಕಡ್ಡಿ ಗೊಂಬೆಗಳನ್ನು ಹೇಗೆ ಮಾಡುವುದು ಎಂಬ ವೀಡಿಯೋವು ಮಕ್ಕಳನ್ನು ಈ ಮುಂದಿನಂತೆ ಮಾತುಕತೆಯಾಡುವುದಕ್ಕೆ ಪ್ರೋತ್ಸಾಹಿಸುತ್ತದೆ:

ಹಂತ 1: ಒಂದು ಚಾರ್ಟ್ ಪೇಪರ್ ತೆಗೆದುಕೊಳ್ಳಿ
ಹಂತ 2: ಅದರ ಮೇಲೆ ಒಂದು ನಾಯಿಯ ಚಿತ್ರವನ್ನು ಬರೆಯಿರಿ.
ಹಂತ 3: ಆ ಚಿತ್ರವನ್ನು ಕತ್ತರಿಸಿ.
ಹಂತ 4: ಅದನ್ನು ಒಂದು ಐಸ್‌ಕ್ರೀಂ ಕಡ್ಡಿಯ ತುದಿಗೆ ಅಂಟಿಸಿ.
ಹಂತ 5: ನಿಮ್ಮ ಆಟದ ಕಡ್ಡಿ ಗೊಂಬೆ ರೆಡಿಯಾಯಿತು.

**ಪಾತ್ರಾಭಿನಯ**

ಆತ್ಮವಿಶ್ವಾಸವನ್ನು ಬೆಳೆಸುವುದಕ್ಕೆ ಸಭಿಕರ ಮುಂದೆ ನಿಂತು ಮಾತನಾಡುವುದಕ್ಕಿಂತ ಉತ್ತಮವಾದ ವಿಧಾನ ಬೇರೆ ಯಾವುದೂ ಇರದು. ಮಕ್ಕಳು ಪಾತ್ರಾಭಿನಯಕ್ಕೆ ಬೇಕಾದ ತುಂಬ ಸರಳವಾದ ಸಂಭಾಷಣೆಗಳನ್ನು ಕಲಿತು ನೆನಪಿಟ್ಟುಕೊಳ್ಳುತ್ತಾರೆ. ತಂಡಗಳಲ್ಲಿ ಅಭ್ಯಾಸ ಮಾಡಿದ ಮೇಲೆ, ಮಕ್ಕಳು ತರಗತಿಯಲ್ಲಿ ಪಾತ್ರಾಭಿನಯವನ್ನು ಪ್ರದರ್ಶಿಸುತ್ತಾರೆ. ಈ ಪಾತ್ರಾಭಿನಯಗಳು ಕಡಿಮೆ ಅವಧಿಯವು ಆಗಿರಬೇಕು ಮತ್ತು ಸರಳವಾದ ಮತ್ತು ಪುನರಾವರ್ತಿತ ಸಂಭಾಷಣೆಗಳಿಂದ ಕೂಡಿರಬೇಕು. ಅವು ನೆನಪಿಟ್ಟುಕೊಳ್ಳುವುದಕ್ಕೂ ಸುಲಭವಾಗಿರಬೇಕು. ಅಲ್ಲಿ ರಂಗಭೂಮಿಯ ಪರಿಕರಗಳಾಗಲೀ, ವೇಷಭೂಷಣಗಳಾಗಲೀ ಅಥವಾ ಪರಿಣಿತ ಸಂಭಾಷಣೆಗಳಾಗಲೀ ಮಹತ್ವದವು ಅಲ್ಲ. ಅವುಗಳ ಮಹದುದ್ದೇಶ ಸಭಿಕರ ಮುಂದೆ ಪ್ರದರ್ಶಿಸಿ ಆತ್ಮವಿಶ್ವಾಸವನ್ನು ಗಳಿಸುವುದು ಮಾತ್ರವೇ ಆಗಿರುತ್ತದೆ.

**ಇಂಗ್ಲಿಷನ್ನು ಸರಾಗ ಓದುವುದು**

ಮಾತನಾಡುವುದು ಭಾರೀ ಪ್ರಮಾಣದಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವಾಗ, ಮಕ್ಕಳು ಇಂಗ್ಲಿಷ್ ಪಠ್ಯವನ್ನೂ ಸರಾಗ ಓದುವುದನ್ನು ಕಲಿಯುವುದು ಅಗತ್ಯವಾಗಿದೆ. ಇದು ಶಾಲೆಯಲ್ಲಿ ಅವರಿಗೆ ಸಹಾಯಮಾಡುವುದು ಮಾತ್ರವಲ್ಲ ಜೊತೆಗೆ ಸ್ವತಂತ್ರವಾಗಿ ಅವರಿಗೆ ಇಷ್ಟವಾಗುವ ಕತೆಗಳನ್ನು ಮತ್ತು ಪುಸ್ತಕಗಳನ್ನು ಓದುವುದನ್ನೂ

ಸಾಧ್ಯಮಾಡುತ್ತದೆ. ಅದೇ ವೇಳೆ ಗ್ರಹಿಸಿ ಅರ್ಥಮಾಡಿಕೊಳ್ಳುವ ಮತ್ತು ಪದಗಳನ್ನು ಬಳಸುವ ಅವರ ಕೌಶಲಗಳನ್ನು ಹೆಚ್ಚಿಸುತ್ತಾ ಹೋಗುತ್ತದೆ.


ಹಲವಾರು ಶಾಬ್ದಿಕ ಕಾರ್ಯಕ್ರಮಗಳು ಅಕ್ಷರ ಮತ್ತು ಶಬ್ದದ ಸಂಬಂಧ ಮತ್ತು ಧ್ವನಿಗಳ ಸಮ್ಮಿಲನವನ್ನೂ ಕಲಿಸುತ್ತವೆ. ಆದರೆ ಅಂತಹ ಕೆಲವು ಕಾರ್ಯಕ್ರಮಗಳಷ್ಟೇ ಮಕ್ಕಳನ್ನು ಮೂರು ಅಕ್ಷರಗಳ ಪದಗಳನ್ನು ಓದುವುದರಿಂದ ಮುಂದಕ್ಕೆ ಕೊಂಡೊಯ್ಯುತ್ತವೆ. ಮಕ್ಕಳು ದೊಡ್ಡ ಪದಗಳನ್ನು ಮತ್ತು ವಾಕ್ಯಗಳನ್ನೂ ಓದುವುದಕ್ಕೆ ಕಲಿಯಬೇಕಿರುವಾಗ, ಶಾಬ್ದಿಕ ವಿಧಾನವನ್ನು ಬಹಳ ಸಲ ಕೈಬಿಡಲಾಗುತ್ತದೆ. ಆಗ ಅವರಿಗೆ ನೋಡಿ ಓದುವುದನ್ನು ಕಲಿಸಲಾಗುತ್ತದೆ ಮತ್ತು ಕಾಗುಣಿತಗಳನ್ನು ಕಂಠಪಾಠ ಮಾಡಲು ಕಲಿಸಲಾಗುತ್ತದೆ. ಇದರ ಪರಿಣಾಮವಾಗಿ ಬಹಳ ಮಕ್ಕಳು ಸರಾಗ ಓದುವುದನ್ನು ಸಾಧಿಸುವಲ್ಲಿ ವಿಫಲರಾಗುತ್ತಾರೆ. ನಮ್ಮ ಕಾರ್ಯಕ್ರಮದಲ್ಲಿ, ಶಾಬ್ದಿಕ ವಿಧಾನವನ್ನು ನಾವು ಮಕ್ಕಳನ್ನು ಅಕ್ಷರಗಳಿಂದ ಚಿಕ್ಕ ಪದಗಳನ್ನು ಓದುವ ಮಟ್ಟಕ್ಕೆ ಕರೆದೊಯ್ಯುವುದು ಮಾತ್ರವಲ್ಲ, ಮುಂದುವರೆಸಿ ವಾಕ್ಯಗಳನ್ನು, ಪುಟ್ಟ ವಾಕ್ಯವೃಂದಗಳನ್ನು ಮತ್ತು ಕಥೆಗಳನ್ನು ಓದುವುದರ ಕಡೆಗೂ ಕರೆದೊಯ್ಯುತ್ತೇವೆ.

ಮಕ್ಕಳು ಇಂಗ್ಲಿಷ್ ಮಾತನಾಡಲು ಕಲಿಯುವಾಗ ಬಹಳ ಮಟ್ಟಿನ ಆತ್ಮವಿಶ್ವಾಸವನ್ನು ಬೆಳೆಸುವ ಅಗತ್ಯವಿರುವಂತೆ, ಮಕ್ಕಳು ಇಂಗ್ಲಿಷ್ ಓದಲು ಮೊದಲ ಹೆಜ್ಜೆಗಳನ್ನು ಇಡುವಾಗಲೂ ಅಂತಹುದೇ ಕ್ರಮಗಳ ಅಗತ್ಯವಿರುತ್ತದೆ. ಈ ಆತ್ಮವಿಶ್ವಾಸವನ್ನು ಬೆಳೆಸುವುದಕ್ಕೆ ಸಹಾಯ ಮಾಡುವಂತಹ ತಂತ್ರಗಳು ಹಲವು ಇವೆ. ಕೆಲವನ್ನು ಈ ಕೆಳಗೆ ಕೊಡಲಾಗಿದೆ:

**ಆಟವಾಡುವುದು ಮತ್ತು ಓದುವುದು**

ಆಟಗಳು ಮಕ್ಕಳಿಗೆ ಪದಗಳನ್ನು ಓದುವುದಕ್ಕೆ ಸಹಾಯಮಾಡುವ ಬಹಳ ದೊಡ್ಡ ವಿಧಾನಗಳಾಗಿದೆ.

ಶಿಕ್ಷಕರು ಸರಳವಾದ ಚಿತ್ರಗಳ ಮತ್ತು ಪದಗಳ ಕಾರ್ಡುಗಳನ್ನು ತಯಾರು ಮಾಡಿಕೊಳ್ಳಬಹುದು. ಅವನ್ನು ನೋಡಿ ನೆನಪಿಸಿಕೊಂಡು ಜೊತೆ ಮಾಡುವ (Memory Match) ಆಟಕ್ಕೆ ಬಳಸಬಹುದು. ಬಿಂಗೋ ಕಾರ್ಡ್ ಆಟಗಳನ್ನು ಮಕ್ಕಳು ಮತ್ತೆ ಮತ್ತೆ ಆಡುವುದಕ್ಕೆ ಇಷ್ಟಪಡುತ್ತಾರೆ.




**ಪದ ಬಿಂಗೋ:**
ಶಿಕ್ಷಕರು ಪದಜಾಲವನ್ನು ರಚಿಸುತ್ತಾರೆ. ಮಕ್ಕಳಿಗೆ ಚಿತ್ರಗಳನ್ನು ತೋರಿಸಿ ಅವನ್ನು ಹೆಸರಿಸುವ ಪದವನ್ನು ಹೊಡೆದು ಮಾಡಲು ಹೇಳುತ್ತಾರೆ. ಪೂರ್ತಿ ಮಾಡಿದ ಅಡ್ಡ ಅಥವಾ ನೇರ ಸಾಲಿಗೆ ಅಂಕಗಳನ್ನು ನೀಡಲಾಗುತ್ತದೆ.




**ನೆನಪಿಸಿ ಹೊಂದಿಸು:**
ಮಕ್ಕಳು ಚಿಕ್ಕ ಗುಂಪುಗಳಲ್ಲಿ ನೆನಪಿಸಿ ಹೊಂದಿಸುವ ಆಟವನ್ನು ಚಿತ್ರ ಮತ್ತು ಅದನ್ನು ಹೆಸರಿಸುವ ಪದವನ್ನು ಜೋಡಿಸಿ ಆಡಬೇಕು.




ಇಎಲ್‌ಎಫ್ ವಾಕ್ಯ ನಿರ್ಮಾಣಕ್ಕೆ ಫ್ಲಿಫ್ ಪುಸ್ತಕವನ್ನು (Flip-book) ಬಳಕೆ ಮಾಡಲಾಗುತ್ತದೆ. ಇದು ಮಕ್ಕಳಿಗೆ ಪದಗಳನ್ನು ಓದುವುದರಿಂದ ವಾಕ್ಯಗಳನ್ನು ಓದುವ ಕಡೆಗೆ ಹೋಗಲು ನೆರವಾಗುತ್ತದೆ. ಶಿಕ್ಷಕರು ತಮ್ಮದೇ ಆದ ಫ್ಲಿಫ್ ಪುಸ್ತಕದ ಪ್ರತಿಗಳನ್ನು ಹಳೇ ಕ್ಯಾಲೆಂಡರ್ ಅಥವಾ ಸ್ಪೈರಲ್ ನೋಟ್ ಪ್ಯಾಡ್‌ಗಳನ್ನು ಬಳಸಿ ತಯಾರಿಸಿಕೊಳ್ಳಬಹುದು. ಮಕ್ಕಳು ಎಡ ಅಥವಾ ಬಲದ ಅರ್ಧ ಭಾಗವನ್ನು ಸರಿಸಿ ವಾಕ್ಯದ ಪ್ರಾರಂಭ ಭಾಗವನ್ನು ಅಥವಾ ವಾಕ್ಯದ ಕೊನೆಯ ಭಾಗವನ್ನು ಪರ್ಯಾಯವಾಗಿ ಬದಲಾಯಿಸಿಕೊಳ್ಳಬಹುದು ಮತ್ತು ಆಗ ರೂಪುಗೊಳ್ಳುವ ಹೊಸ ವಾಕ್ಯವನ್ನು ಓದಬಹುದು. ಈ ಚಟುವಟಿಕೆಯನ್ನು ತಂಡವಾಗಿಯೂ, ವೈಯುಕ್ತಿಕವಾಗಿಯೂ ಕೈಗೊಳ್ಳಬಹುದು.

ಪುನರಾವರ್ತಿಸು, ಪುನರಾವರ್ತಿಸು, ಪುನರಾವರ್ತಿಸು
ಪುನರಾವರ್ತನೆಯ ಪಠ್ಯಗಳು ಆರಂಭಿಕ ಓದುಗರಿಗೆ ಹೆಚ್ಚು ಓದುವುದಕ್ಕೆ ಆತ್ಮವಿಶ್ವಾಸವನ್ನು ನೀಡುತ್ತವೆ.

ಆಕೆ ನೆಗೆಯುವುದಕ್ಕೆ ಇಷ್ಟಪಡುತ್ತಾಳೆ.
ಆಕೆ ಹಾರುವುದಕ್ಕೆ ಮತ್ತು ಜಿಗಿಯುವುದಕ್ಕೆ ಇಷ್ಟಪಡುತ್ತಾಳೆ
ಆಕೆ ಮಳೆಯಲ್ಲಿ ನೆಗೆಯುವುದಕ್ಕೆ ಮತ್ತು ಜಿಗಿಯುವುದಕ್ಕೆ ಇಷ್ಟಪಡುತ್ತಾಳೆ.
ಅವಳು ಇಡೀ ದಿನ ಮಳೆಯಲ್ಲಿ ನೆಗೆಯುವುದಕ್ಕೆ ಮತ್ತು
ಜಿಗಿಯುವುದಕ್ಕೆ ಇಷ್ಟಪಡುತ್ತಾಳೆ.

ಓದುವಿಕೆಯನ್ನು ಸರಳಗೊಳಸುವ ವಿಸ್ತೃತ ವಾಕ್ಯಗಳು




ವಾಕ್ಯವನ್ನು ವಿಸ್ತರಿಸಿ
ಮಕ್ಕಳು ವಾಕ್ಯ ರಚಿಸಿ ಮತ್ತು ಓದಲು ನೆರವಾಗುವಂತೆ ಸರಳವಾದ ಕಾರ್ಡ್‌ಗಳ ಬಳಕೆ

ಸರಳವಾಗಿರಲಿ
ಆರಂಭಿಕ ಓದುಗರಿಗೆ ಬಳಕೆ ಭಾಷೆಯಲ್ಲಿರುವ ಪದಗಳನ್ನು ಒಳಗೊಂಡ ಸರಳವಾದ ಪಠ್ಯಗಳ ಅಗತ್ಯವಿದೆ. ವಾಕ್ಯಗಳು ಕಿರಿದಾಗಿರಬೇಕಿದ್ದು. ಅಕ್ಷರ ಗಾತ್ರ ದೊಡ್ಡದಾಗಿರಬೇಕು ಮತ್ತು ಪದಗಳ ನಡುವೆ ಸಾಕಷ್ಟು ಬಿಳಿಯಾದ ಖಾಲಿ ಜಾಗವಿರಬೇಕು.

| **ಆರಂಭಿಕ ಓದುಗರಿಗೆ ಸೂಕ್ತವಾದ ವಾಕ್ಯಗಳು** | **ಆರಂಭಿಕ ಓದುಗರಿಗೆ ಸೂಕ್ತವಲ್ಲದ ವಾಕ್ಯಗಳು** |
|---|---|
| ಮೀರಾಳಿಗೆ ಒಂದು ಹೊಸ ಪೆನ್ ದೊರಕಿತು.<br>ಆ ಪೆನ್ನು ಕೆಂಪಗಿತ್ತು.<br>ಅವಳು ಅದನ್ನು ತನ್ನ ಬ್ಯಾಗಿನ ಒಳಗೆ ಇಟ್ಟುಕೊಂಡಳು.<br>ಮೀರಾಳಿಗೆ ತನ್ನ ಹೊಸ ಪೆನ್ ಇಷ್ಟವಾಯಿತು. | ಮೀರಾ ಡಿಪಾರ್ಟ್‌ಮೆಂಟಲ್ ಸ್ಟೋರ್‌ನಿಂದ ಒಂದು ಹೊಸ ಪೆನ್ನನ್ನು ಕೊಂಡಳು.<br>ಆ ಪೆನ್ನು ಹೊಳಪಾಗಿ ಮತ್ತು ನಯವಾಗಿದ್ದು ಮತ್ತು ಅದಕ್ಕೆ ಚಿನ್ನದ ಬಣ್ಣದ ನಿಬ್ ಇತ್ತು.<br>ಮೀರಾಳ ತಾಯಿ ಅದನ್ನು ಅವಳ ಪೆನ್ಸಿಲ್ ಬಾಕ್ಸಿನ ಒಳಗೆ ಇಟ್ಟುಕೊಳ್ಳಲು ಹೇಳಿದರು ಮತ್ತು ಅದನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವುದಾಗಿ ಮಾತು ಕೊಡುವಂತೆ ಕೇಳಿದರು. |

### ತರಗತಿಯ ಹೊರಗಿನ ಇಂಗ್ಲಿಷ್

ಮಕ್ಕಳು ಇಂಗ್ಲಿಷನ್ನು ತರಗತಿಯ ಹೊರಗೆಯೂ ಬಳಸುವುದನ್ನು ನಾವು ಹೇಗೆ ಖಾತರಿಪಡಿಸುವುದು?

ನಾವು ಕೆಲಸ ಮಾಡಿದ ಶಾಲೆಗಳಲ್ಲಿ 'ನಡೆಯಿರಿ ಮಾತನಾಡಿರಿ' (Walk 'n' Talk) ಅನ್ನುವ ಕಾರ್ಯಕ್ರಮವನ್ನು ಪರಿಚಯಿಸಿದ್ದೆವು. ಇದರ ಉದ್ದೇಶ ಇಂಗ್ಲಿಷನ್ನು ತರಗತಿಯ ಹೊರಗೆ ಮತ್ತು ಮಕ್ಕಳ ಮನೆಗಳಿಗೆ ಒಯ್ಯುವುದಾಗಿತ್ತು. ಮಕ್ಕಳು ಶಾಲೆ ಮುಗಿಸಿ ಮನೆಗೆ ಹಿಂದಿರುಗಿದ ಮೇಲೂ ಇಂಗ್ಲಿಷ್ ಬಳಸಬೇಕು ಎಂದು ನಾವು ಬಯಸಿದ್ದೆವು. ಆದರೆ ಇಂಗ್ಲಿಷ್ ಬಲ್ಲ ಒಬ್ಬರೂ ಇಲ್ಲದ ಸಮುದಾಯಗಳಲ್ಲಿ ಇದನ್ನು ಸಾಧಿಸುವುದು ಹೇಗೆ?

'ನಡೆಯಿರಿ ಮಾತನಾಡಿರಿ' ಕಾರ್ಯಕ್ರಮದಲ್ಲಿ, ಸಂಜೆ ಮಕ್ಕಳು ಶಾಲೆಯಿಂದ ಮನೆಗಳಿಗೆ ಹಿಂದಿರುಗಿದ ಮೇಲೆ, ಅವರ ನೆರೆಹೊರೆಯಲ್ಲಿ ಗುಂಪಾಗಿ ಓಡಾಡುತ್ತಾರೆ ಮತ್ತು ವಯಸ್ಕರೊಂದಿಗೆ ಇಂಗ್ಲೀಷಿನಲ್ಲಿ ಪ್ರಶ್ನೆಗಳನ್ನು ಕೇಳುತ್ತಾ ಹೋಗುತ್ತಾರೆ. ಮಕ್ಕಳಿಗೆ ಪ್ರಶ್ನೆಗಳನ್ನು ತಮಿಳಿಗೆ ತರ್ಜುಮೆ ಮಾಡುವ ಅವಕಾಶ ಇದೆ. ಆ ರೀತಿಯಾಗಿ ಪೋಷಕರಿಗೆ, ಅಜ್ಜ-ಅಜ್ಜಿಯರಿಗೆ ಮತ್ತು ಉಳಿದ ವಯಸ್ಕರಿಗೆ ಇಂಗ್ಲೀಷಿನಲ್ಲಿ ಹೇಗೆ ಪ್ರತಿಕ್ರಿಯೆ ಕೊಡುವುದು ಎಂದು 'ಕಲಿಸು'ತ್ತಾರೆ. ಮಕ್ಕಳು ತಾವು ತಿಳಿದಿರುವ ಸ್ವಲ್ಪ ಇಂಗ್ಲೀಷನ್ನು ಹಿರಿಯರಿಗೆ 'ಕಲಿಸಿದಾಗ', ಇಡೀ ಸಮುದಾಯವೇ ಅವರ ಬಗೆಗೆ ಹೆಮ್ಮೆಯನ್ನು ಅನುಭವಿಸಲು ಪ್ರಾರಂಭಿಸುತ್ತದೆ. ಇದು ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.

ಪ್ರತಿ ಸಾಧನೆಗಳನ್ನು ಸಂಭ್ರಮಿಸುವುದು

ಇಂಗ್ಲಿಷ್ ಭಾಷೆಯನ್ನು ಕಲಿಯುವುದರ ಗುರಿ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದು ಎಂದಾದರೆ, ಆಗ ಮಕ್ಕಳ ಕಲಿಕಾ ಸಾಧನೆಯನ್ನು ಪ್ರತಿ ಹಂತದಲ್ಲೂ ಸಂಭ್ರಮಿಸಬೇಕು. ಸಾಮಾನ್ಯವಾಗಿ, ಪ್ರತಿ ತರಗತಿಯ ಮುಂಚೂಣಿಯ ಸಾಧಕರಿಗೆ ಮಾತ್ರ ಬಹುಮಾನ ಅಥವಾ ಮೆಚ್ಚುಗೆಯ ಮಾತುಗಳು ಸಿಗುತ್ತವೆ. ಆದರೆ ನಾವು ಪ್ರತಿ ಮಗುವೂ ಇಂಗ್ಲಿಷ್ ಕಲಿಯಬೇಕು ಎಂದು ಬಯಸುತ್ತೇವಾದರೆ, ಆಗ ನಾವು ಪ್ರಗತಿಯನ್ನು ಸಂಭ್ರಮಿಸಬೇಕೇ ಹೊರತು ಕ್ಷಮತೆಯ ಮಟ್ಟವನ್ನಲ್ಲ.

ಪ್ರತಿ ಅವಧಿಯ ಕೊನೆಗೆ ನಾವು ಮಕ್ಕಳಿಗೆ ಒಂದು ಕೌಶಲ ಮೇಳವನ್ನು ಆಯೋಜಿಸುತ್ತೇವೆ. ಇಡೀ ಶಾಲೆ ಹಬ್ಬದ ವಾತಾವರಣದಲ್ಲಿ ಕಂಗೊಳಿಸುತ್ತದೆ. ಶಾಲೆಯೊಳಗಿನ ಎಲ್ಲಾ ಸ್ಥಳಗಳಲ್ಲೂ ಅಕ್ಷರಗಳ ಸ್ಟಾಲುಗಳು, ಪದಗಳ ಸ್ಟಾಲುಗಳು, ವಾಕ್ಯದ ಸ್ಟಾಲುಗಳು ಮತ್ತು ಚಿತ್ರದ ಸ್ಟಾಲುಗಳು ಸ್ಥಾಪಿತವಾಗಿರುತ್ತವೆ. ಮಕ್ಕಳು ಅವರ ಮಟ್ಟಕ್ಕಿರುವ ಯಾವುದೇ ಸ್ಟಾಲನ್ನೂ ಆಯ್ದುಕೊಳ್ಳಬಹುದು. ಆ ಸ್ಟಾಲಿನಲ್ಲಿರುವ ಕಾರ್ಡುಗಳನ್ನು ಓದಲು ಪ್ರಯತ್ನಿಸಬಹುದು. ಅವರು ಒಂದು ಚಿತ್ರದ ಕಾರ್ಡನ್ನು ಆರಿಸಿಕೊಳ್ಳಬಹುದು, ಅದರ ಬಗೆಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಬಹುದು. ಅವರು ಹೆಚ್ಚಿನ ಪ್ರಶ್ನೆಗಳನ್ನು ಸರಿಯಾಗಿಯೇ ಉತ್ತರಿಸಿದರೆ, ಅವರಿಗೆ ಅವರ ದಿನಚರಿಯಲ್ಲಿ ಅಥವಾ ಕಾರ್ಡಿನಲ್ಲಿ ಅಂಟಿಸಿಕೊಳ್ಳುವ ಒಂದು ಸ್ಟಿಕರ್ ಲಭಿಸುತ್ತದೆ. ಕೆಲವು ಶಾಲೆಗಳಲ್ಲಿ ಪೋಷಕರನ್ನೂ ಆಮಂತ್ರಿಸಿ ಅವರ ಮಕ್ಕಳ ಪ್ರಗತಿಯನ್ನು ವೀಕ್ಷಿಸುವ ವ್ಯವಸ್ಥೆಯೂ ಇದೆ. ಪ್ರತಿ ಸಾಧನೆಯೂ, ಅದೆಷ್ಟೇ ಚಿಕ್ಕದಿದ್ದರೂ, ಸಂಭ್ರಮಾಚರಣೆಗೆ ಅರ್ಹವೇ ಆಗಿರುತ್ತದೆ.

ಪ್ರತಿ ಮಗುವೂ, ಅದರ ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆ ಏನೇ ಇದ್ದರೂ ಅದು ಇಂಗ್ಲಿಷ್ ಕಲಿಯುವ ಸಾಮರ್ಥ್ಯ ಹೊಂದಿದೆ ಎಂದು ನಂಬಿದರಷ್ಟೇ ಸಾಲದು. ತಮಗೆ ಆ ಸಾಮರ್ಥ್ಯವಿದೆ ಎಂದು ಮಕ್ಕಳೂ ನಂಬುವಂತೆ ಮಾಡಬೇಕು. ನಾವು ಮಕ್ಕಳ ಆತ್ಮವಿಶ್ವಾಸವನ್ನು ಅವರ ಕೌಶಲದ ಜೊತೆಗೆ ಹೆಚ್ಚಿಸಿದಾಗ ತಾವು ಬಯಸಿದ ಏನನ್ನೇ ಆದರೂ ಸಾಧಿಸಬಲ್ಲ ಆತ್ಮವಿಶ್ವಾಸ ಇರುವ ಹೊಸ ತಲೆಮಾರಿನ ಮಕ್ಕಳನ್ನು ಬೆಳೆಸಿಬಿಡುತ್ತೇವೆ.






**ಚಂದ್ರಾ ವಿಶ್ವನಾಥನ್**: ಇಎಲ್‌ಎಫ್ ಲರ್ನಿಂಗ್ ಸೊಲ್ಯೂಷನ್‌ನ ಸ್ಥಾಪಕ ನಿರ್ದೇಶಕಿ. ಈ ಸಂಸ್ಥೆಯು ಭಾರತದ ಎಲ್ಲಾ ಭಾಗದ ಮಕ್ಕಳಲ್ಲಿ, ಯುವಕರಲ್ಲಿ ಮತ್ತು ವಯಸ್ಕರಲ್ಲೂ ಇಂಗ್ಲಿಷ್ ಕೌಶಲಗಳನ್ನು ಬೆಳೆಸುವ ಗುರಿಯನ್ನು ಹೊಂದಿದೆ. ವಿಶೇಷವಾಗಿ ಮೊದಲ ತಲೆಮಾರಿನ ಇಂಗ್ಲಿಷ್ ಕಲಿಕಾರ್ಥಿಗಳ ಅವಶ್ಯಕತೆಗಳನ್ನು ಗಮನಿಸಿ ಕೆಲಸ ಮಾಡಲಾಗುತ್ತದೆ. ಚಂದ್ರಾ ಮತ್ತು ಅವರ ಇಎಲ್‌ಎಫ್ ಇಂಗ್ಲಿಷ್ ತಂಡವು ಇಂಗ್ಲಿಷ್ ಕಲಿಕೆಗೆ ಬೇಕಾದ ಹಲವು ಬಗೆಯ ಹೊಸ ಕಲಿಕಾ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿವೆ. ಅವನ್ನು ನೂರಕ್ಕೂ ಹೆಚ್ಚಿನ ಶಾಲೆಗಳಲ್ಲಿ ಶಿಕ್ಷಕರು ಮತ್ತು ಮಕ್ಕಳು ಬಳಸುತ್ತಾರೆ. ಚಂದ್ರಾ ಅವರು ಏಯ್ಡ್ ಇಂಡಿಯಾ (AID INDIA) ಎಂಬ ಲಾಭ ರಹಿತ ಒಂದು ಶಿಕ್ಷಣ ಸಂಸ್ಥೆಯ ಭಾಗವಾಗಿ, ಶೈಕ್ಷಣಿಕ ಸಂಶೋಧನೆ, ಪಠ್ಯಕ್ರಮ, ಸರಕಾರೀ ಶಾಲೆಗಳಲ್ಲಿ ತರಬೇತಿ ಮತ್ತು ಕಾರ್ಯಕ್ರಮಗಳ ಅನುಷ್ಠಾನದ ಕುರಿತು 20 ವರ್ಷಗಳಿಗೂ ಹೆಚ್ಚಿನ ಅನುಭವವನ್ನು ಗಳಿಸಿದ್ದಾರೆ. ತಮಿಳುನಾಡು ಸರಕಾರದ ಸರ್ವ ಶಿಕ್ಷಾ ಅಭಿಯಾನಕ್ಕಾಗಿ ಪ್ರಾಥಮಿಕ ಶಿಕ್ಷಣದ ಸಂಪನ್ಮೂಲ ವ್ಯಕ್ತಿಯಾಗಿ ಮತ್ತು ತರಬೇತುದಾರರಾಗಿ, ಶಾಲೆಗಳಲ್ಲಿ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಜೊತೆಗೆ ಕಾರ್ಯನಿರ್ವಹಿಸಿ ದ್ದಾರೆ. ಅವರು ಮಕ್ಕಳ ಕಲಿಕಾ ಫಲಗಳ ಸಾಧನೆಯ ಸುಧಾರಣೆಗಾಗಿ ಸರಕಾರೀ ಶಾಲೆಗಳ ಸುಮಾರು 10,000ಕ್ಕೂ ಹೆಚ್ಚಿನ ಶಿಕ್ಷಕರ ಜೊತೆಗೆ ಕೆಲಸ ಮಾಡಿದ್ದಾರೆ. ಇವರನ್ನು: chandra.aid@gmail.com ನಲ್ಲಿ ಸಂಪರ್ಕಿಸಬಹುದು.



ಅನುವಾದ: **ರಾಮಕೃಷ್ಣ ಭಟ್** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**